ಕೇರಳಕ್ಕೆ ಹೋಗುವ ರಸ್ತೆಯನ್ನು ಕೂಡಲೇ ರಿಪೇರಿ ಮಾಡಿಸಿಕೊಡಬೇಕು. ತಕ್ಷಣವೇ ಇದರ ಬಗ್ಗೆ ಕಾರ್ಯೋನ್ಮುಕರಾಗಬೇಕೆಂದು ತಮ್ಮಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಯ ಬಗ್ಗೆ 1972ರಿಂದ ಇಲ್ಲಿಯವರೆಗೂ ಕೂಡ ರಾಜ್ಯಕ್ಕೆ ಒಂದು ಹೊಸ ರಸ್ತೆ ಕೂಡ ಮಂಜೂರಾಗಿಲ್ಲವೆಂದು ಈ ಸದನದಲ್ಲೂ ಮತ್ತು ಆ ಸದನದಲ್ಲೂ ಸಾಕಷ್ಟು ಬಾರಿ ಚರ್ಚೆಯಾಗಿದೆ. ಮಾನ್ಯ ಸದಸ್ಯರು ಈ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಆದ್ದರಿಂದ ಕೇಂದ್ರಕ್ಕೆ ನಾವು ಮೊದಲು ಯಾವುದಾಗಬೇಕೆಂದು ಮನವಿಯನ್ನು ಕಳುಹಿಸಿಯೂ ಕೂಡ ಆಗಿದೆ. ಕಾರಣಾಂತರದಿಂದ ಕೇಂದ್ರವನ್ನು ಹಣಕಾಸಿನ ಅಡ್ಡಿಯನ್ನು ಮುಂದಿಟ್ಟು ಅದನ್ನು ಹಿಂದಕ್ಕೆ ಕಳುಹಿಸುತ್ತಿದ್ದಾರೆ. ಮಾನ್ಯ ಸದಸ್ಯರು ಈಗ ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಮೈಸೂರು-ಬೆಂಗಳೂರಿಗೆ ಒಂದು ಎಕ್ಸ್‌ಪ್ರೆಸ್ ವೇ ಬೇಕು ಎಂದು, ಇದರ ಬಗ್ಗೆ ಸರ್ವೆಯೂ ಕೂಡ ಆಗಿದೆ, ಮತ್ತು ಟೆಂಡರ್ ಕೂಡ ಕರೆಯಲಾಗಿದೆ. ಅದರ ಬಗ್ಗೆ ಪರಿಶೀಲನೆ ಕೂಡ ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಕೊನೆಯ ದಿವಸ ಇಷ್ಟು ಜೋರಾಗಿ ಒತ್ತಾಯ ಮಾಡಿದರೆ ನಾಳೆಯೇ ರಸ್ತೆಯಾಗುತ್ತದೆಯೇ ಸ್ವಾಮಿ?

ಶ್ರೀ ಎಂ. ಪಿ. ವೆಂಕಟೇಶ್ : ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಮಾಡಿಸಿ ಎಂದು ನಾವು ಹೇಳುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ್ : ಮುಂದಿನ ಸಾರಿ ಅಲ್ಲಿಗೆ ನಮ್ಮ ವೆಂಕಟೇಶ್ವರವನ್ನೇ ಕಳುಹಿಸಿ ಬಿಡೋಣ. ಮಾನ್ಯ ಹರ್ಷಕುಮಾರ್‌ಗೌಡರ ಗಂಟಲು ದೊಡ್ಡದಾಗಿದೆ, ಈ ಧ್ವನಿಯನ್ನು ಅಲ್ಲೇ ಎತ್ತಿಬಿಡಲಿ. ನಮಗೆ ಇಲ್ಲಿ ಈ ಧ್ವನಿಯಕಾಟವೂ ಕಡಿಮೆಯಾಗುತ್ತದೆ. ಸರ್ಕಾರ ತೀವ್ರವಾಗಿ ಇದರ ಬಗ್ಗೆ ಗಮನಹರಿಸಿದೆ. 'ಎಕ್ಸ್‌ಪ್ರೆಸ್‌ವೇ' ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅದೂ ಕೂಡ ದೊಡ್ಡ ಒಂದು ಹಣಕಾಸಿನ ವಿಚಾರ ಇದರಲ್ಲಿದೆ.

ಡಾ॥ ವಿಜಯಕುಮಾರ್ ಖಂಪ್ರೆ : ಮಾನ್ಯ ಅಧ್ಯಕ್ಷರೇ, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಕೆಲಸವನ್ನು ಎರಡು ಸಾವಿರದ ಇಸವಿಗೆ ಪೂರ್ತಿಗೊಳಿಸಬೇಕೆಂದು ಸರ್ಕಾರದ ಉದ್ದೇಶವಿದ್ದರೂ ಇದುವರೆಗೂ ಯಾವ ಹೊಸ ಕೆಲಸವನ್ನೂ ಶುರುಮಾಡಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ತಮ್ಮ ಹೇಳಿಕೆಯನ್ನು ಕೂಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

*ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸಭಾಪತಿಯವರೇ, ಈಗ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಅಲೋಕೇಟ್ ಮಾಡಿದಂಥ ನೀರು 173 ಟಿ.ಎಂ.ಸಿ. ಅಂದರೆ 119 ಟಿ.ಎಂ.ಸಿ. ಫಸ್ಟ್‌ಸ್ಟೇಜ್‌ನಲ್ಲಿ ಮತ್ತು 54 ಟಿಎಂಸಿ ಸೆಕೆಂಡ್ ಸ್ಟೇಜ್‌ನಲ್ಲಿ.

ನಾರಾಯಣಪುರ ಬಲದಂಡೆ ಯೋಜನೆ ಅದು ಎರಡನೇ ಹಂತದಲ್ಲಿದೆ. ಅದು ಸುಮಾರು 95 ಕಿಲೋಮಿಟರ್ ಉದ್ದವಿದ್ದು ಸುಮಾರು 84 ಸಾವಿರ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗುವುದು. ಇದು ನಾರಾಯಣಪುರ ಡ್ಯಾಮ್‌ನಿಂದ 27 ಕಿಲೋಮಿಟರ್‌ರವರೆಗೆ ಷೋರಬ್ ಆಫ್ ತಮನ್‌ಕಲ್ ಅದು ಅಂದರೆ ಗ್ರಾಂಡ್ ಪವರ್‌ಹೌಸ್‌ಗೆ ಹೋಗಬೇಕೆಂದು ನಿರ್ಣಯ ಮಾಡಿದೆ. ಈ ಇರಿಗೇಷನ್ ಕ್ಯಾನಲ್ ಫೋರೆಬೆಯಿಂದ ತಮನ್‌ಕಲ್ ಅಂಡರ್‌ಗ್ರೌಂಡ್ ಪವರ್‌ಹೌಸ್‌ನಿಂದ 27 ಕಿಲೋಮಿಟರ್‌ವರೆಗೆ ಇದೆ. ಇದರ ಉದ್ದೇಶವೇನೆಂದು ಸುಮಾರು ಅಲ್ಲಿಯವರೆಗೆ ಕಾಲುವೆ 25 ಕಿಲೋಮಿಟರ್ ಮಾಡಿದರೆ ಸುಮಾರು 12 ಸಾವಿರ ಹೆಕ್ಟೇರ್ ಹೆಡ್‌ವರ್ಕ್ ನಾರಾಯಣಪುರ ಹೆಡ್ ವರ್ಕ್‌ನಿಂದ ಷೆರಬ್ ತಮನ್‌ಕಲ್ ಪವರ್‌ಹೌಸ್‌ನವರೆಗೆ ಅದನ್ನು ಬೇಬಿಕೆನಾಲ್ ಎಂದು ಹೇಳುತ್ತಾರೆ. ಆ ಪ್ರಕಾರ ಅದನ್ನು ಮಾಡಿದರೆ ಸುಮಾರು 27 ಕಿಲೋಮಿಟರ್‌ನಿಂದ 95 ಕಿ.ಮಿ.ರವರೆಗೆ ಸುಮಾರು 72 ಸಾವಿರ ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡುತ್ತದೆ. ಈ ಒಂದು ಸರ್ವೆಕೆಲಸ ಮಾಡಲಿಕ್ಕೆ 27 ಕಿ.ಮಿ.ಗೆ ಮೆಸರ್ಸ್ ಕನ್‌ಸೆಲ್ಟಿಂಗ್ ಇಂಜಿನಿಯರಿಂಗ್ ಸರ್ವೀಸ್ ನ್ಯೂಡೆಲ್ಲಿ ಎಂದು ಹೇಳಿ ಅವರಿಗೆ ಈಗಾಗಲೇ ಅದರ ಒಂದು ಸರ್ವೆ ಕೆಲಸವನ್ನು ಕೊಡಲಾಗಿದೆ. ಸರ್ವೆ ಕೆಲಸ 0 ಕಿಲೋಮಿಟರ್‌ನಿಂದ ಅಂದರೆ ನಾರಾಯಣಪುರ ಡ್ಯಾಂನಿಂದ 27 ಕಿಲೋಮಿಟರ್ ರವರೆಗೆ, ಅದು ಕೂಡಲೇ ಪ್ರಾರಂಭವಾಗಿ 2-3 ವರ್ಷದಲ್ಲಿ ಪೂರ್ತಿ ಮಾಡಲಿಕ್ಕೆ ಸಾಧ್ಯ ಆಗುತ್ತದೆ. ಅದರ ಒಟ್ಟು ಎಸ್ಟಿಮೇಟೆಡ್ ಕಾಸ್ಟ್ 95 ಕಿಲೋಮಿಟರ್‌ರವರೆಗೆ 208 ಕೋಟಿ ರೂಪಾಯಿ ಇರುತ್ತದೆ. ಬೇಬಿ ಕೆನಾಲ್ ಕಾಸ್ಟ್ 0 ಇಂದ 27 ಕಿಲೋಮಿಟರ್‌ರವರೆಗೆ 30 ಕೋಟಿ ಆಗುತ್ತದೆ. ಆ ವರದಿ ಎಲ್ಲಾ ತರಿಸಿದ ಮೇಲೆ ನಾವು ಈ ಬೇಬಿ ಕೆನಾಲ್ ಮಾಡಬೇಕಾದರೆ ಈ ವರ್ಷಕ್ಕೆ 5 ಕೋಟಿ ರೂಪಾಯಿ ಇದೆ. ನಾನು ಹೆಚ್ಚುವರಿ ಹಣ ಉಪಯೋಗ ಮಾಡಿಕೊಂಡು ಬೇಬಿ ಕೆನಾಲ್ ವರ್ಕ್‌ನ್ನು ಸರ್ವೆ ವರದಿ ಬಂದ ಕೂಡಲೇ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮುಖ್ಯಮಂತ್ರಿಗಳು ಕೆಲವೊಂದು ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆಂಬ ಆಶ್ವಾಸನೆ ಕೊಟ್ಟಿದ್ದರು. ನೀವು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಕೆಲವು ಕ್ಷೇತ್ರದಲ್ಲಿ 2 ಲಕ್ಷ ರೂಪಾಯಿ ಕೆಲಸ ಕೂಡ ಸೇರಿಲ್ಲ. ನಮ್ಮ ಹತ್ತಿರ ಯಾವ ಯಾವ ಕೆಲಸ ಆಗಬೇಕೆಂದು ಕೇಳುವುದರಲ್ಲಿ ಮತ್ತು ಅದನ್ನು ಮಂಜೂರ್ಮಾಡುವ ವ್ಯವಸ್ಥೆ ನೋಡಿದರೆ, ನೀವು ಕೇಳುವುದರಲ್ಲೂ ಅರ್ಥವಿಲ್ಲ, ನಾವು ಕೊಡುವುದರಲ್ಲೂ ಅರ್ಥವಿಲ್ಲ. ಯಾವ ಆಧಾರದ ಮೇಲೆ ಈ ಪಟ್ಟಿ ತಯಾರಿಸಿದ್ದೀರೆಂಬುದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳು ಪ್ರತಿಯೊಂದು ಕ್ಷೇತ್ರಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಡತ್ತೇವೆಂದು ಹೇಳಿ ಇಲ್ಲಿಯವರೆಗೆ ಸೇರಿಸಿಲ್ಲ.

(ಗೊಂದಲ)